## ಮಿತಿ ಇಲ್ಲದ ತಾಯಿ ಮಗಳು

ಕಲರ್ಸ್ ಕನ್ನಡದ 'ಇವಳು ಸುಜಾತ'ದಲ್ಲಿ ಸುಜಾತಾಳ ಮನೆಯಲ್ಲಿ ಅವಳ ಅತ್ತಿಗೆ ಹಾಗೂ ಅವಳ ಮಗಳ ಕಾಟ ನೋಡಲು ತುಂಬಾ ಕಿರಿ ಕಿರಿ ಅನ್ನಿಸುತ್ತದೆ. ಮನೆಯಲ್ಲಿ ಎಲ್ಲರೂ ಪುಣ್ಯಕೋಟಿ ರೀತಿ ಇರುತ್ತಾರೆ. ಗಂಡನಾದವನು ಹೆಂಡತಿ ತಪ್ಪು ಮಾಡಿದಾಗ ಅಬ್ಬರಿಸಿ ನಂತರ ತಣ್ಣಗಾಗುತ್ತಾನೆ. ಕಾರಣ ಅವನಿಗೆ ಸರಿಯಾದ ಕೆಲಸ ಇಲ್ಲ. ಹೆಂಡತಿ ಹಾಗೂ ಅವಳ ಮಗಳಿಗೆ ಮನೆಯಲ್ಲಿ ವಿಧವೆಯಾದ ಸುಜಾತಾ ತಂದು ಹಾಕುತ್ತಾಳೆ. ತಾಯಿಮಗಳು ತಿಂದು ಮಜಾ ಉಡಾಯಿಸಬೇಕು. ಸುಜಾತಾ ಮರು ಮದುವೆ ಆದರೆ ಎಲ್ಲಿ ದುಡ್ಡಿಗೆ ಸಂಚಕಾರ ಬರುತ್ತದೋ ಎಂದು ಅದಕ್ಕೂ ಕಲ್ಲು. ಅತ್ತೆ ಮಾವ ಅನ್ನಿಸಿಕೊಂಡವರು ಅವಳ ವಿರುದ್ಧ ದನಿ ಎತ್ತುವುದೇ ಇಲ್ಲ.

—ಎನ್.ಎಸ್. ಚಂದ್ರಶೇಖರ್ ಬೆಂಗಳೂರು

## ಸೂಪರ್ ಮಹಿಳೆ!

ಮಹಿಳೆಯರಿಗೆ ಸಮಾನತೆ ನಮ್ಮ ಧಾರಾವಾಹಿಗಳಲ್ಲಿ ಯಥೇಚ್ಛವಾಗಿ ದೊರೆತಿದೆ! ಧಾರಾವಾಹಿಗಳ ತಯಾರಕರಿಗೆ ದೊಡ್ಡ ನಮಸ್ಕಾರ ಮತ್ತು ತುಂಬು ಹೃದಯದ ಕೃತಜ್ಞತೆಗಳು. ಯಾಕೆ ಅಂತೀರಾ? ಒಂದು ಕಾಲದಲ್ಲಿ ಕೇವಲ ಪುರುಷ ಖಳನಾಯಕರೇ ಇರುತ್ತಿದ್ದರು. ಈಗ ಧಾರಾವಾಹಿಗಳಲ್ಲಿ ಖಳನಾಯಕಿಯದ್ದೇ ಮೇಲುಗೈ. ಆಕೆ ಒಂಟಿಕೈಯಲ್ಲಿ ಎಷ್ಟು ಜನ ಖದೀಮರನ್ನು ಹ್ಯಾಂಡಲ್ ಮಾಡ್ತಾಳೆ! ಅವಳು ಕೊಟ್ಟ ಟಾಸ್ಕ್ ಖದೀಮ ಸಹಚರರು ಸರಿಯಾಗಿ ನಿರ್ವಹಿಸಿದ್ದರೆ ಖದೀಮರಿಗೆ ಎಷ್ಟು ಚೆನ್ನಾಗಿ ಕಪಾಳ ಮೋಕ್ಷ ಮಾಡುತ್ತಾಳೆ.

—ವೀಣಾ ಜೋಶಿ, ಬಾರ್ಕೂರು

## ಸಾರ್ಥಕತೆ ಏನು?

ಝೀ ಕನ್ನಡದಲ್ಲಿ 'ಕಾಮಿಡಿ ಕಿಲಾಡಿ' ಇತ್ತೀಚಿನ ಪ್ರಯೋಗಗಳನ್ನು ಗಮನಿಸಿದರೆ ಹಾಸ್ಯದ ದೃಷ್ಟಿಯಿಂದ ತುಂಬಾ ಬಾಲಿಶವಾಗಿ ಕಾಣುತ್ತವೆ. ವಿಷಯದ ಆಯ್ಕೆಯಲ್ಲಿ ಏಕತಾನತೆ ಎದ್ದು ಕಾಣುತ್ತಿದೆ. ಹಾಸ್ಯವನ್ನು ಅರಳಿಸಬೇಕಾದ ಸಂಭಾಷಣೆ ಯಾವ ಪರಿಣಾಮವನ್ನೂ ಬೀರುತ್ತಿಲ್ಲ. ಆದರೆ ನಿರೂಪಕರು ಕಲಾವಿದರು ಬಿದ್ದು ಬಿದ್ದು ನಗವುದನ್ನು ನೋಡಿದರೆ ಅಯ್ಯೋ ಪಾಪ ಎನಿಸುತ್ತದೆ.

ವಾರದ ಪತ್ರ

## ವೀಕ್ಷಕರ ದನಿಗೆ ಕಿವಿಕೊಡಿ

ನಮ್ಮ ಧಾರಾವಾಹಿಗಳ ನಿರ್ಮಾಪಕರು, ನಿರ್ದೇಶಕರು ವೀಕ್ಷಕರ ಅಭಿಪ್ರಾಯಗಳತ್ತ ಗಮನ ಕೊಡುತ್ತಾರೋ ಇಲ್ಲವೋ ಎಂದು ಸಂದೇಹ ಬರುತ್ತಿದೆ. ವಿಕ್ಷಕರು ವಸ್ತುನಿಷ್ಠವಾಗಿ ತಪ್ಪು ಒಪ್ಪುಗಳನ್ನು ಗುರುತಿಸಿದರೂ ಧಾರಾವಾಹಿಗಳಲ್ಲಿ ದಿನದಿಂದ ದಿನಕ್ಕೆ ಅಸಹಜ ಸಂಗತಿಗಳು ಹೆಚ್ಚುತ್ತಿವೆ. ಖಳನಾಯಕಿಯರ ಹಾವಳಿ ಮಿತಿ ಮೀರಿದೆ. ದೌರ್ಜನ್ಯಕ್ಕೆ ಕೊನೆಯೇ ಇಲ್ಲವೇ ಎನ್ನುವಂತೆ ಕಾಣಿಸುತ್ತಿದೆ. ಒಂದೇ ಧಾರಾವಾಹಿಯ ಛಾಯಾ ಪ್ರತಿಯಂತೆ ಮತ್ತೊಂದರಲ್ಲಿ ನಕಲು ಮಾಡಿರುತ್ತಾರೆ.

'ಗಟ್ಟಿಮೇಳ'ದಲ್ಲಿ ನಾಯಕಿ ಕುಡಿದು ತೂರಾಡುವ ದೃಶ್ಯ 'ಪಾರು' ಧಾರಾವಾಹಿಯಲ್ಲಿ ಕಾಣಿಸುತ್ತಿದೆ. ಅಜ್ಞಾತವಾಸದ ಬೋರ್ ಹೊಡೆಸುವ ಕಂತುಗಳು ಬೇರೆ ಬೇರೆ ಧಾರಾವಾಹಿಯಲ್ಲಿಯೂ ಮರುಕಳಿಸುತ್ತಿದೆ. 'ಗೀತಾ' ಇದುವರೆಗೆ ಸಾಕಷ್ಟು ಪ್ರೇಕ್ಷಕರ ಟೀಕೆಗೆ ಒಳಗಾಗಿದ್ದರೂ ಸ್ವಲ್ಪವೂ ಸುಧಾರಣೆಯಾಗಿಲ್ಲ. 'ಯಾರೇ ಕೂಗಾಡಲಿ ಊರೇ ಹೋರಾಡಲಿ' ಅನ್ನೋ ರೀತಿ ಆಗಬಾರದಲ್ಲವೇ?

—ಆರ್. ವೀರೇಶ್ ಕುಮಾರ್ ಬೆಂಗಳೂರು

ಈ ವಾರ ಪ್ರಸಾರವಾದ ಕುಡುಕರ ಒಂದು ಪ್ರಯೋಗ ಯಾವ ಸಂದೇಶವನ್ನು ನೀಡಬಯಸಿತ್ತು ಎಂಬುದು ತಿಳಿಯಲಿಲ್ಲ. ಕುಡುಕರ ಚಟವನ್ನು ಬಿಡಿಸುವವ ತಾನೇ ಕುಡಿಯಲು ಆರಂಭಿಸುತ್ತಾನೆ. ಇದನ್ನು ಕಂಡ ಕುಡುಕರು ವಿಜಯ ಸಾಧಿಸಿ ಸಂಭ್ರಮಿಸುವಂತೆ ಕಾಣಿಸುತ್ತಿತ್ತು. ಅಂದರೆ ಮದ್ಯ ಸೇವನೆ ಅನಿವಾರ್ಯ ಎಂಬಂತೆ ಬಿಂಬಿತವಾಯಿತು. ಇದರಿಂದ ಸಮಾಜಕ್ಕೆ ತಪ್ಪು ಸಂದೇಶ ಹೋಗುತ್ತದೆ ಎಂಬುದು ನಿರ್ದೇಶಕರ ಗಮನಕ್ಕೂ ಬಾರದೇ ಇರುವುದು ತುಂಬಾ ವಿಷಾದಕರ ಸಂಗತಿ. ಎಲ್ಲವೂ ಹಾಸ್ಯಕ್ಕಾಗಿ ಎನ್ನುವ ಸಮಜಾಯಿಷಿಯನ್ನು ನೀಡುವುದಾದರೆ ಬಂಗಾರದ ಸೂಜಿ ಎಂದು ಕಣ್ಣಿಗೆ ಚುಚ್ಚಿಕೊಂಡಂತೆ. ದಯವಿಟ್ಟು ಸಮಾಜಕ್ಕೆ ಒಳ್ಳೆಯ ಆರೋಗ್ಯಕರವಾದ ಸಂದೇಶ ರವಾನಿಸುವ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಿ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಮಜಾ ಅಲ್ಲ, ಸಜಾ

ಕಲರ್ಸ್ ಕನ್ನಡದ 'ಮಜಾ ಭಾರತ' ಮಜಾ ಕಳೆದುಕೊಂಡಿದೆ. ವಾರದ ಐದು ದಿನವೂ ಬೇಸರ ತರಿಸುತ್ತದೆ. ಹೇಳಿದನ್ನೇ ಹೇಳುವ, ನೋಡಿದವರನ್ನೇ ನೋಡುವ, ಅದೇ ಹೊಡಿಬಡಿ, ಎರಡೆರಡು ಅರ್ಥಬರುವ, ತೀರ್ಪುಗಾರರ ಹೆಸರನ್ನು ಪದೇ ಪದೇ ಹೇಳುವ, ಮೆಸೇಜ್ ಇಲ್ಲದ ಡ್ರಾಮ ನೋಡುವಂತಾಗಿದೆ. ಇತ್ತೀಚೆಗೆ ಬಂದ ಸೃಜನ್ ಲೋಕೇಶ್ ಬಲವಂತವಾಗಿ ನಕ್ಕಹಾಗಿತ್ತು. ಇನ್ನು ಮುಂದಾದರೂ ಒಳ್ಳೆಯ ಸಂಭಾಷಣೆ, ನೀತಿ, ಹಿತವಚನದಿಂದ ಕೂಡಿದ ಎಪಿಸೋಡ್ ಬರಲೆಂದು ವಿನಂತಿ.

—ಅಂಚೆ ಸುಬ್ರಹ್ಮಣ್ಯ, ಕೊಪ್ಪ

## ಅಸ್ವಾಭಾವಿಕ 'ಮಗಳು ಜಾನಕಿ'

ಜನಪ್ರಿಯ ಧಾರಾವಾಹಿ 'ಮಗಳು ಜಾನಕಿ' ಕಥಾ ಹಂದರವು ಸ್ವಲ್ಪ ಅಸ್ವಾಭಾವಿಕ ಮತ್ತು ಅಸಮಂಜಸ ಎನಿಸುತ್ತದೆ. ನಾಯಕಿ ಜಾನಕಿ ಸೇರಿದಂತೆ ಯಾರಿಗೂ ರಶ್ಮಿ ಭಾರ್ಗಿ– ಸಿಎಸ್ಪಿ ವಿಚ್ಛೇದನ, ಅವರಿಗೆ ಇಬ್ಬರು ಮಕ್ಕಳಿರುವುದು ಗೊತ್ತಿಲ್ಲ. ಹಿರಿಯ ರಾಜಕಾರಣಿ ಮತ್ತು ಮಂತ್ರಿಯಾಗಿರುವ ಚಂದು ಭಾರ್ಗಿ ಸಾಂಸಾರಿಕ ಜೀವನದ ವಿವರಗಳು ಸಾರ್ವಜನಿಕರಿಗೆ ಮತ್ತು ಮಾಧ್ಯಮದವರಿಗೆ ತಿಳಿದಿರುವುದಿಲ್ಲ ಎನ್ನುವುದು ತೀರ ಆಶ್ಚರ್ಯಕರ. ಈಚಿನ ದಿನಗಳಲ್ಲಿ ನಮ್ಮ ಯಾವ ರಾಜಕಾರಣಿಯ ವೈಯುಕ್ತಿಕ ಜೀವನದ ವಿವರಗಳು ಗೌಪ್ಯವಾಗಿವೆ ಹೇಳಿ? ಸುಲಭ ಉದಾಹರಣೆಗಳು ಬೇಕಾದಷ್ಟಿವೆ. ಇಂತಹ ರಹಸ್ಯದ ಮೇಲೆ ಬೆಳೆಯುತ್ತಿರುವ ಕಥೆಯು ಬಹಳ ಟೊಳ್ಳು ಎನಿಸುವುದಿಲ್ಲವೇ?

—ಎಂ.ಜಿ. ಶ್ರೀನಾಥ್, ಮೈಸೂರು

## ವೈಜ್ಞಾನಿಕ ವಿವೇಚನೆಯೂ ಇಲ್ಲ

ಕಲರ್ ಸೂಪರ್‌ನ 'ಮಗಳು ಜಾನಕಿ'ಯ ಮಧು–ಧಾತ್ರಿ ವಿವಾಹ ಪ್ರಸಂಗದಲ್ಲಿ ವೈಜ್ಞಾನಿಕ ವಿವೇಚನೆ ಇಲ್ಲ. ಸೋದರ ಸಂಬಂಧಿಗಳಾದ ಇವರಿಬ್ಬರೂ ಪರಸ್ಪರ ಇಷ್ಟಪಟ್ಟಿದ್ದರು. ಮನೆಯವರ ಒತ್ತಾಸೆಯಂತೆ ಮದುವೆಗೆ ಸಿದ್ಧರಾಗಿರುತ್ತಾರೆ. ಆಗ ಶ್ಯಾಮಲತ್ತೆಯ ಪರಿಚಯದ ವೈದ್ಯರೊಬ್ಬರು ಹೀಗೆ ಸಂಬಂಧಿಕರಲ್ಲಿ ಮದುವೆಯಾದರೆ ಹುಟ್ಟುವ ಮಕ್ಕಳಲ್ಲಿ ಅನುವಂಶೀಯ ಕಾಯಿಲೆಗಳ ಸಾಧ್ಯತೆ ಹೆಚ್ಚು ಎಂದರು. ಕೊನೆಗೆ ಮಧು–ಧಾತ್ರಿ 'ಮದುವೆ ಆಗೋಣ, ಆದರೆ ಮಕ್ಕಳು ಬೇಡ' ಎಂಬ ನಿರ್ಧಾರಕ್ಕೆ ಬರುತ್ತಾರೆ. ಆದರೆ ಈ ಬಗೆಯ ಅನುವಂಶೀಯ ಕಾಯಿಲೆಯ ಮಕ್ಕಳು ಜನಿಸುವ ಸಾಧ್ಯತೆ ಎಲ್ಲರಲ್ಲೂ ಇರುತ್ತದೆ. ಸಂಬಂಧದ ಮದುವೆಗಳಲ್ಲಿ ಸಾಧ್ಯತೆ ಹೆಚ್ಚೆಂಬುದು ನಿಜವಾದರೂ, ಮಕ್ಕಳನ್ನೇ ಹೊಂದಬಾರದೆಂಬುದೇನೂ ಇಲ್ಲ. ಈ ರೀತಿಯ ಸಂಬಂಧದಲ್ಲಿ ಆರೋಗ್ಯವಂತ ಮಕ್ಕಳು ಹೊಂದಿರುವ ಹಲವು ಉದಾಹರಣೆಗಳಿವೆ. ಆಧುನಿಕ ವೈಜ್ಞಾನಿಕ ಪರೀಕ್ಷೆಗಳು ಈಗ ಲಭ್ಯವಿದ್ದು, ಮಗುವಿನ ಅನುವಂಶೀಯ ಆರೋಗ್ಯದ ಕುರಿತು ಖಚಿತ ಮಾಹಿತಿ ಪಡೆದೇ ಮಕ್ಕಳನ್ನು ಹೊಂದಬಹುದು.

—ಎಚ್.ಎಸ್. ನವೀನಕುಮಾರ್, ಹೊಸದುರ್ಗ

## ರಸಮಯ ಗೋಷ್ಠಿ

ಏಕತಾನತೆಯಿಂದ ಕೂಡಿದ 'ಸಿಲ್ಲಿ ಲಲ್ಲಿ'ಯಲ್ಲಿ ಕವಿಗೋಷ್ಠಿ ಮುದ ನೀಡಿತು. ಹಾಸ್ಯ ಕವಿಗಳು ಒಂದೇ ಕಡೆ ಮೇಳೈಸಿದ್ದು ನೋಡಲು ಚೆನ್ನಾಗಿತ್ತು. ಒಮ್ಮೊಮ್ಮೆ ಈ ರೀತಿಯ ಬದಲಾವಣೆ ಬಿತ್ತರಿಸಿದರೆ ವೀಕ್ಷಕರಿಗೂ ಹಿತವಾಗುತ್ತದೆ.

—ಅರುಣ್ ಕೆ.ಎನ್. ಬೆಂಗಳೂರು